





## ಎಲೆ ಕಲೆ

ನಿಸರ್ಗವೇ ಒಂದು ಕಲೆ. ಆದರೆ ಬದುಕಿನ ಜಂಜಡಗಳಲ್ಲಿ ಕಳೆದುಹೋಗುವ ಮಾನವನಿಗೆ ಪ್ರಕೃತಿಯ ಈ ಕೃತಿ ಸುಲಭಕ್ಕೆ ಅರ್ಥವಾಗುವುದಿಲ್ಲ. ಒಳಗಣ್ಣು ತೆರೆದು ನೋಡಿದರಷ್ಟೆ ಭೂರಮೆಯ ಸುಂದರ ಚಿತ್ತಾರಗಳು ಕಾಣಬಲ್ಲವು. ಹಾಗೆ ಎಲೆಯ ಈ ಕಲೆ ಕೂಡ. ಭಿನ್ನ ಭಿನ್ನ ಚಿತ್ತಾರದಂತೆ ಕಾಣುತ್ತಿರುವ ಈ ಎಲೆಯ ಕಲಾವಿದರು ಬೇರಾರೂ ಅಲ್ಲ, ನಾನಾ ವಿಧದ ಕೀಟಗಳು. ತಮ್ಮ ಆತ್ಮರಕ್ಷಣೆಗೆಂದು ಎಲೆ ಮರೆಯಲ್ಲಿ ಅವಿತು, ಹೊಟ್ಟೆಪಾಡಿಗಾಗಿ ಎಲೆಗಳನ್ನು ತಿಂದು, ಆ ಎಲೆಗಳು ನಾನಾ ಆಕಾರ ತಳೆಯುವಂತೆ ಮಾಡಿವೆ ಕೀಟಗಳು. ಕೀಟಗಳು ತಿಂದು ಉಳಿಸಿದ ಎಲೆಯ ಭಾಗಗಳು ಒಂದಕ್ಕಿಂತ ಒಂದು ವಿಭಿನ್ನ ಆಕಾರದಲ್ಲಿ ಕಂಡುಬಂದವು. ಕೀಟಗಳು ಚಿತ್ರಿಸಿದ ಈ ಕಲೆಯನ್ನು ನನ್ನ ಕ್ಯಾಮೆರಾ ಕಣ್ಣಲ್ಲಿ ಹೀಗೆ ತುಂಬಿಕೊಂಡೆ.

–ಎಂ.ಆರ್. ಮಂಜುನಾಥ್

## ಕುಳತ್ತುಪುಳ ಶಾಸ್ತಾದ ‘ಯಕ್ಷಿಯಮ್ಮ’

ಕೇರಳದ ಕೊಲ್ಲಂ ಜಿಲ್ಲೆಯ ‘ಕುಳತ್ತುಪುಳ ಶಾಸ್ತಾ’ (Kulathupuzha Shasta) ದೇವಾಲಯವು, ಕೇರಳದ ಐದು ಪ್ರಮುಖ ಶಾಸ್ತಾ ದೇವಾಲಯಗಳಲ್ಲಿ ಒಂದಾಗಿದ್ದು, ಇಲ್ಲಿ ಪೂಜಿಸುವ ಬಾಲಶಾಸ್ತಾ ವಿಗ್ರಹವನ್ನು ಪರಶುರಾಮ ಪ್ರತಿಷ್ಠಾಪಿಸಿದರೆಂದು ಹೇಳುತ್ತಾರೆ. ದೇಗುಲದ ಆವರಣದಲ್ಲಿ ‘ಯಕ್ಷಿಯಮ್ಮ’ ದೇವಾಲಯವಿದ್ದು, ಈ ದೇವಿಗೆ ಹರಕೆ ಹೊತ್ತರೆ ಸಂತಾನಭಾಗ್ಯ ಸಿಗುತ್ತದೆ ಎಂಬುದು ಸ್ಥಳೀಯರ ನಂಬಿಕೆ.

ಈ ಹರಕೆ ಹೊರುವ ಮಹಿಳೆಯರು ಮರದಿಂದ ತಯಾರಿಸಿದ ಚಿಕ್ಕ ಚಿಕ್ಕ ತೊಟ್ಟಿಲುಗಳನ್ನು ದೇಗುಲಕ್ಕೆ ತೂಗು ಹಾಕುತ್ತಾರೆ. ದೇವಾಲಯದ ಆವರಣದಲ್ಲಿ ಶಿವ, ವಿಷ್ಣು, ಗಣೇಶ, ಕರುಪ್ಪುಸ್ವಾಮಿ ದೇವರುಗಳ ಉಪಾಲಯಗಳೂ ಇವೆ. ‘ದೇವರ ಮಕ್ಕಳೆಂದು’ ಕರೆಯುವ ದೇವಾಲಯದ ಕಲ್ಯಾಣಿಯಲ್ಲಿ ಸಾಕಲಾಗಿರುವ ಮೀನುಗಳಿಗೆ ಮಂಡಕ್ಕಿ ಹಾಕುವುದರಿಂದ ‘ನರೋಲಿ’ಗಳು ವಾಸಿಯಾಗುತ್ತವೆ ಎಂದೂ ಸ್ಥಳೀಯರು ಹೇಳುತ್ತಾರೆ.

–ಜಿ. ನಾಗೇಂದ್ರ, ಕಾವೂರು, ಸಂಡೂರು





## ಕಾಷ್ಠದಲ್ಲರಳಿದ ಕಲಾ ಕುಸುರಿಗಳು

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಭದ್ರಾ ಜಲಾಶಯದ ಬಳಿ ಇರುವ ರಿವರ್ ಟರ್ನ್ ಜಂಗಲ್ ಲಾಡ್ಜ್‌ನ ಭೋಜನಾಲಯದಲ್ಲಿರುವ ಕಾಷ್ಠ ಶಿಲ್ಪಗಳು ಅತ್ಯಂತ ಆಕರ್ಷಕವಾಗಿವೆ. ಕಲಾವಿದನ ಕಲ್ಪನೆಗೆ ಅನುಸಾರವಾಗಿ ಇಲ್ಲಿ ಗಣಪತಿ, ಆನೆ, ಮೊಸಳೆ, ಸಿಂಹಗಳು ಅರಳಿ ನಿಂತಿವೆ. ಅನಾಮಿಕ ಕಲಾವಿದನ ಕೈಚಳಕ ನಿಜಕ್ಕೂ ಕಣ್ಮನ ಸೆಳೆಯುವಂತಿದೆ ಹಾಗೂ ಭೋಜನಾಲಯಕ್ಕೆ ವಿಶೇಷ ಮೆರುಗು ತಂದಿದೆ. ಜಂಗಲ್ ಲಾಡ್ಜ್‌ನ ಅಗಮ್ಯ ಕಾಡುಗಳಲ್ಲಿ ಸಫಾರಿ ಹೋಗಿಬಂದ ಪ್ರವಾಸಿಗರ ಹಸಿದ ಹೊಟ್ಟೆ ತಣಿಯುವುದರ ಜೊತೆಗೆ ಉತ್ತಮ ಕಲಾಕೃತಿಗಳನ್ನು ನೋಡಿದ ಖುಷಿಯೂ ಸಿಗುತ್ತದೆ.

–ಎಚ್.ಎಸ್. ನವೀನಕುಮಾರ್, ಹೊಸದುರ್ಗ